ಇ) 9278

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಸೇಡಂ ತಾಲ್ಲೂಕಿನಲ್ಲಿ ಆಶ್ರಯ ಹಾಗೂ ಅಂಬೇಡ್ಕರ್ ಮನೆಗಳು

1134 (1365) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಆಶ್ರಯ ಹಾಗೂ ಅಂಬೇಡ್ಕರ್ ಯೋಜನೆಯಡಿಯಲ್ಲಿ ಮೋತಕಪಲ್ಲಿ, ನಾಡೇಪಲ್ಲಿ ಮತ್ತು ಮುಧೋಳ ಗ್ರಾಮಗಳಲ್ಲಿ ನಿರ್ಮಾಣ ಮಾಡಿರುವ ಮನೆಗಳು ಫಲಾನುಭವಿಗಳಿಗೆ ಕೊಡುವ ಮೊದಲೇ ಬಿದ್ದು ಹೋಗಿ, ಕೆಲವು ಮನೆಗಳು ನೆಲಸಮವಾಗಿ ಈ ಮನೆಗಳಿಂದ ಬಡ ಫಲಾನುಭವಿಗಳಿಗೆ ಉಪಯೋಗವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಒಂದೊಂದು ಗ್ರಾಮದಲ್ಲಿ ಮನೆಗಳ ಸಂಖ್ಯೆ ಎಷ್ಟು; ಹಾಗೂ ಒಂದೊಂದು ಮನೆಗೆ ತಗುಲಿರುವ ಹಣವೆಷ್ಟು; ಇವುಗಳ ಒಟ್ಟು ಮೊತ್ತವೆಷ್ಟು ?

ಇ) ಈ ಮನೆಗಳು ಫಲಾನುಭವಿಗಳಿಗೆ ಒಪ್ಪಿಸಿರುವಂತೆ ದಾಖಲಾತಿ ಮಾಡಿರುವುದು ನಿಜವೆ; ಒಂದು ವೇಳೆ ಈ ಪ್ರಕಾರ ಸುಳ್ಳು ದಾಖಲಾತಿ ಮಾಡಿರುವವರ ಮೇಲೆ ಕೈಗೊಳ್ಳುವ ಕ್ರಮವೇನು; ಈಗಲಾದರೂ ಈ ತಪ್ಪಿತಸ್ಥ ಅಧಿಕಾರಿಯವರ ಮೇಲೆ ಕ್ರಮ ಕೈಗೊಂಡು ಮುಂದೆ ಈ ಮನೆಗಳನ್ನು ಪುನಃ ನಿರ್ಮಿಸಿ ಬಡ ನಿರಾಶ್ರಿತ ಫಲಾನುಭವಿಗಳಿಗೆ ವಾಸಿಸಲು ಕೊಡಲಾಗುವುದೇ?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ)

ಗ್ರಾಮ	ಆಶ್ರಯ ಮಂಜೂರಾದ ವರ್ಷ	ಅಂಬೇಡ್ಕರ್ ಮಂಜೂರಾದ ವರ್ಷ
೧) ಮೋತಕಪಲ್ಲಿ	೩೦ ೧೧ (೯೪-೯೫)	(೯೧-೯೨)
೨) ನಾಡೇಪಲ್ಲಿ	೬ (೯೧-೯೨)	-
೩) ಮುಧೋಳ	೩೦ (೯೪-೯೫)	-
ಒಂದೊಂದು ಮನೆಗೆ ತಗುಲಿದ ವೆಚ್ಚ	ರೂ.೧೫.೦೦೦	
ಒಟ್ಟು ಮೊತ್ತ	೧೦.೫೫ ಲಕ್ಷಗಳು	

ಇ) ಉದ್ಭವಿಸುವುದಿಲ್ಲ